# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1006(1043)
2. ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು)
3. ಉತ್ತರಿಸಬೇಕಾದ ದಿನಾಂಕ : 16.12.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರದ ಉಡಾನ್ ಯೋಜನೆಯಡಿ ಸ್ಥಾಪನೆಯಾದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ವಿಮಾನ ನಿಲ್ದಾಣಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ವಿಮಾನಯಾನ ಸೌಲಭ್ಯವನ್ನು ಕಲ್ಪಿಸಲಾಗಿದೆ; | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪ್ರಾದೇಶಿಕ ವಾಯು ಸಂಪರ್ಕ (ಉಡಾನ್) ಯೋಜನೆಯಡಿ ಈ ಕೆಳಕಂಡ ಒಟ್ಟು ಎಂಟು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ.<br>1. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ<br>2. ಮೈಸೂರು ವಿಮಾನ ನಿಲ್ದಾಣ<br>3. ಬೀದರ್ ವಿಮಾನ ನಿಲ್ದಾಣ<br>4. ವಿದ್ಯಾನಗರ ವಿಮಾನ ನಿಲ್ದಾಣ'<br>5. ಹುಬ್ಬಳ್ಳಿ ವಿಮಾನ ನಿಲ್ದಾಣ<br>6. ಬೆಳಗಾವಿ ವಿಮಾನ ನಿಲ್ದಾಣ<br>7. ಕಲಬುರಗಿ ವಿಮಾನ ನಿಲ್ದಾಣ<br>8. ಶಿವಮೊಗ್ಗ ವಿಮಾನ ನಿಲ್ದಾಣ<br>ಈ ಯೋಜನೆಯಡಿ ಒಟ್ಟು 42 ಮಾರ್ಗಗಳಲ್ಲಿ ವಿಮಾನಯಾನ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. |
| (ಆ) | ಪ್ರಸ್ತುತ, ಹೊಸದಾಗಿ ಎಲ್ಲೆಲ್ಲಿ ವಿಮಾನ ನಿಲ್ದಾಣ ಕಾಮಗಾರಿಗಳು ಚಲನೆಯಲ್ಲಿವೆ; (ವಿವರ ಒದಗಿಸುವುದು;) | ರಾಜ್ಯದಲ್ಲಿ ಹೊಸದಾಗಿ ಹಾಸನ ಮತ್ತು ರಾಯಚೂರು ವಿಮಾನ ನಿಲ್ದಾಣಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| (ಇ) | ಪ್ರಯಾಣಿಕರ ಕೊರತೆಯಿಂದಾಗಿ ವಿಮಾನಯಾನ ಸೇವೆಯನ್ನು ಸ್ಥಗಿತಗೊಳಿಸಿರುವುದು ವರದಿಯಾಗಿದೆಯೇ; ವರದಿಯಾಗಿದ್ದಲ್ಲಿ, ಪುನಃ ಕಾರ್ಯಾರಂಭಗೊಳಿಸಲು ಕೇಂದ್ರದೊಂದಿಗೆ ಸಮಾಲೋಚನೆ ನಡೆಸಲಾಗಿದೆಯೇ? | ಕೇಂದ್ರ ಸರ್ಕಾರದ ಪ್ರಾದೇಶಿಕ ವಾಯು ಸಂಪರ್ಕ (ಉಡಾನ್) ಯೋಜನೆಯಡಿ ಒಟ್ಟು 42 ವಿಮಾನಯಾನ ಮಾರ್ಗಗಳು ವಿವಿಧ ಸುತ್ತಿನ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುತ್ತದೆ.<br>ವಿಮಾನಯಾನ ಕಾರ್ಯನಿರ್ವಾಹಕ ಸಂಸ್ಥೆಗಳು ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಸಂಸ್ಥೆಯೊಂದಿಗೆ ಒಡಂಬಡಿಕೆ ಯನ್ನು ಮಾಡಿಕೊಂಡಿರುತ್ತವೆ. ಸದರಿ ಒಡಂಬಡಿಕೆಯಂತೆ ಕನಿಷ್ಠ 3 ವರ್ಷಗಳ ಕಾಲ ವಿಮಾನಯಾನ ಸೇವೆಯನ್ನು ಒದಗಿಸಬೇಕಾಗಿರುತ್ತದೆ. ಪ್ರಾದೇಶಿಕ ವಾಯು ಸಂಪರ್ಕ (ಉಡಾನ್) ಯೋಜನೆಯಡಿ ಆಯ್ಕೆಯಾದ ವಿಮಾನಯಾನ ಮಾರ್ಗಗಳ ಪ್ರಸ್ತುತ ಸ್ಥಿತಿಯು ಈ ಕೆಳಗಿನಂತಿದೆ. |

| ಕ್ರ ಸಂ | ವಿವರಗಳು | ಮಾರ್ಗಗಳ ಸಂಖ್ಯೆ: |
|---|---|---|
| 1. | 3 ವರ್ಷಗಳು ಪೂರ್ಣಗೊಂಡು ಸಕ್ರಿಯವಿಲ್ಲದ ಮಾರ್ಗಗಳ ಸಂಖ್ಯೆ: | 33 |
| 2. | 3 ವರ್ಷಗಳು ಪೂರ್ಣಗೊಂಡು ಸಕ್ರಿಯವಿರುವ ಮಾರ್ಗಗಳ ಸಂಖ್ಯೆ: | 4 |
| 3. | ಪ್ರಸ್ತುತ ವಿ.ಜಿ.ಎಫ್ ಪಾವತಿಯೊಂದಿಗೆ ಸಕ್ರಿಯವಿರುವ ಮಾರ್ಗಗಳ ಸಂಖ್ಯೆ: | 5 |

ವಿಮಾನಯಾನ ಸೇವೆಯನ್ನು ಮುಂದುವರೆಸಲು / ಪ್ರಾದೇಶಿಕ ವಾಯು ಸಂಪರ್ಕ (ಉಡಾನ್) ಯೋಜನೆಯ ಅಡಿಯಲ್ಲಿ ಇತರ ಅರ್ಹ ನಿರ್ವಾಹಕರಿಂದ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವಂತೆ ಕೇಂದ್ರ ಸರ್ಕಾರವನ್ನು ದಿನಾಂಕ:26.10.2025ರ ಪತ್ರದಲ್ಲಿ ಕೋರಲಾಗಿದೆ.

ಸಂಖ್ಯೆ: ಮೂಅಇ 261 ರಾಅವಿ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು